# ಚಿಂತನ ಮಂಥನ: ಭಾಷಾ ಬೋಧನ-ಕಲಿಕೆ

# ಭಾಷೆ ಕಲಿಕೆಯ ಉದ್ದೇಶಗಳೇನು?

# ಭಾಷೆ ಕಲಿಕೆಯ ಉದ್ದೇಶಗಳೇನು?

- ಮಗುವಿನ ಅರಿವಿನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು
- ಭಾಷೆಯ ಮೂಲಕ ತರ್ಕಬದ್ಧವಾಗಿ, ಸೃಜನಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ ಯೋಚಿಸುವುದು ಮತ್ತು ಚರ್ಚೆಯಲ್ಲಿ ಭಾಗವಹಿಸುವುದು
- ಕೇವಲ ವಿಸಂಕೇತಿಸುವುದಲ್ಲದೆ. ಗ್ರಹಿಕೆಯೊಂದಿಗೆ ಆಲಿಸುವುದು, ಓದುವುದು
- ಕಲ್ಪನಾಶಕ್ತಿ ಮತ್ತು ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವುದು
- ಭಾಷೆಯ ಲಯ, ಸಂಧರ್ಭಕ್ಕೆ ತಕ್ಕಂತೆ ಬಳಸುವ ರೀತಿ ಮತ್ತು ಉಚ್ಛಾರಣೆಯನ್ನು ತಿಳಿಸಿಕೊಡುವುದು
- ವಿದ್ಯಾರ್ಥಿಗಳು ತಮ್ಮ ವಾತಾವರಣ, ನೆರೆಹೊರೆಯವರು ಮತ್ತು ರಾಷ್ಟ್ರದ ಬಗ್ಗೆ ಸಂವೇದನಾಶೀಲರಾಗುವುದು
- ನಾಡು, ಸಂಸ್ಕೃತಿಯ ಉಳಿವು ಮತ್ತು ಉನ್ನತಿಗಾಗಿ

# ಭಾಷೆ ಬೋಧನೆ ಕಲಿಕೆಯಲ್ಲಿ ನೀವು ಎದುರಿಸುತ್ತಿರುವ ಸವಾಲುಗಳೇನು?

ಪ್ರಗತಿಪರ' ಸಿದ್ಧಾಂತದ ಪ್ರಕಾರ, ವೈರಸ್‌ಗಳು ಕೋಶವೊಂದರ ನ್ಯೂಕ್ಲಿಕ್ ಆಮ್ಲಗಳ ಸರಳ, ಚರ ತುಣುಕುಗಳಾಗಿ ಆವಿರ್ಭವಿಸಿ. ನಂತರ, ಹಾನಿಯಾದ ಪೊರೆಗಳನ್ನೊಳಗೊಂಡ ಕೋಶಗಳ ಒಳ-ಹೊರಗೆ ಓಡಾಡಬಲ್ಲ ಶಕ್ತಿಯನ್ನು ಗಳಿಸಿಕೊಂಡವು. ಪ್ರಗತಿಶೀಲ ವಿಧಾನದಲ್ಲಿ, ಈ ತುಣುಕುಗಳು ಕೆಲ ರಚನಾತ್ಮಕ ಪ್ರೋಟೀನುಗಳ ಜನೆಟಿಕ್ ಅನುಕ್ರಮವನ್ನು ಅರ್ಜಿಸಿಕೊಂಡು ಆರೋಗ್ಯವಂತ ಜೀವಕೋಶಕ್ಕೆ ಅಂಟಿಕೊಳ್ಳುವ ಮತ್ತು ಸೋಂಕು ತರಬಲ್ಲ ಸಾಮರ್ಥ್ಯ ಗಳಿಸಿಕೊಂಡಿರಬಹುದು. ವ್ಯತಿರಿಕ್ತವಾಗಿ, 'ಪ್ರತಿಗಾಮಿ' (Regressive hypothesis) ಸಿದ್ಧಾಂತದ ಪ್ರಕಾರ. ವೈರಸ್‌ಗಳು ಸಂಕೀರ್ಣವಾದ. ಸ್ವತಂತ್ರ ಜೀವಿಗಳಿಂದ ಉಗಮವಾಗಿದ್ದಿರಬಹುದು. ಪ್ರತಿಗಾಮಿ ಅಥವಾ ಮೊಟಕಾಗುವ ಕ್ರಿಯೆಯ ಮೂಲಕ ಕಾಲಾನುಕ್ರಮದಲ್ಲಿ ತಮ್ಮ ಜನೆಟಿಕ್ ಮಾಹಿತಿಗಳನ್ನು ಕಳೆದುಕೊಂಡು ಈ ಜೀವಿಗಳು ಮರುಸೃಷ್ಟಿಗಾಗಿ ಪರಾವಲಂಬಿಗಳಾಗಿದ್ದಿರಬಹುದು. ಬೇರೆ ಜೀವಿಗಳ ಅಸ್ತಿತ್ವಕ್ಕೂ ಮುನ್ನ ವೈರಸ್‌ಗಳು ಜೀವಿಗಳಾಗಿದ್ದಿರಲಿಕ್ಕಿಲ್ಲ ಎಂಬ ಊಹೆಯ ಆಧಾರದ ಮೇಲೆ ಈ ಎರಡು ಸಿದ್ಧಾಂತಗಳು ರೂಪುಗೊಂಡಿವೆ

# ಸಾಮಾಜಿಕ ಮತ್ತು ಶೈಕ್ಷಣಿಕ ಭಾಷಾ ಕೌಶಲ್ಯಗಳು

- **ಮೂಲಭೂತ ಪರಸ್ಪರ ಸಂವಹನ ಕೌಶಲ್ಯಗಳು (BICS)** ಅಥವ ಸಾಮಾಜಿಕ ಭಾಷಾ ಕೌಶಲ್ಯಗಳೆಂದರೆ **ಸಾಂದರ್ಭಿಕ ಸಂಭಾಷಣೆಗಳು** ಮತ್ತು **ದೈನಂದಿನ ಸಂವಹನಗಳಲ್ಲಿ** ಬಳಸುವ ಭಾಷಾ ಕೌಶಲ್ಯಗಳು. ಈ ರೀತಿಯ ಭಾಷಾ ಪ್ರಾವೀಣ್ಯತೆಯನ್ನು ಭಾಷೆ ಕಲಿಯುವವರು ಸಾಮಾನ್ಯವಾಗಿ 2 ವರ್ಷಗಳಲ್ಲಿ ಸಾಧಿಸುತ್ತಾರೆ
- ಮತ್ತೊಂದೆಡೆ **ಬೌದ್ಧಿಕ ಶೈಕ್ಷಣಿಕ ಭಾಷಾ ಕೌಶಲ್ಯಗಳು (CALP)** ಭಾಷಾ ರಚನೆಗಳು ಮತ್ತು ಪರಿಕಲ್ಪನೆಗಳ ಆಳವಾದ ತಿಳುವಳಿಕೆಯನ್ನು ಒಳಗೊಂಡಿದ್ದು, ಇನ್ನೂ **ಹೆಚ್ಚು ಸಂಕೀರ್ಣವಾದದ್ದು**. **ಶೈಕ್ಷಣಿಕ ಸಂದರ್ಭಗಳಲ್ಲಿ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಬಳಸುವುದು**, **ಸಮಸ್ಯೆ-ಪರಿಹರಿಸುವುದು ಮತ್ತು ವಿಮರ್ಶಾತ್ಮಕ ಚಿಂತನೆ**ಯಂತಹ ಶೈಕ್ಷಣಿಕ ಯಶಸ್ಸಿಗೆ ಅಗತ್ಯವಿರುವ ಈ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಇನ್ನೂ ಹೆಚ್ಚು ಸಮಯ ಅಗತ್ಯ.
- BICS ಅನ್ನು ತ್ವರಿತವಾಗಿ ಪಡೆದುಕೊಳ್ಳಬಹುದಾದರೂ, ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುವುದನ್ನು ಖಚಿತಪಡಿಸಿಕೊಳ್ಳಲು CALP ಗೆ ನಿರಂತರ ಬೆಂಬಲ ಮತ್ತು ಅಭಿವೃದ್ಧಿ ಅಗತ್ಯವಿರುತ್ತದೆ. ಇವೆರೆಡರ **ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವುದರಿಂದ ಕಲಿಯುವವರ ಸಾಮಾಜಿಕ ಮತ್ತು ಶೈಕ್ಷಣಿಕ ಭಾಷಾ ಅಗತ್ಯತೆಗಳಿಗೆ ಶಿಕ್ಷಕರು ತಮ್ಮ ಬೋಧನ ವಿಧಾನ ಮತ್ತು ತಂತ್ರಗಳನ್ನು ಯೋಜಿಸಲು/ಹೊಂದಿಸಲು ಸಹಾಯ ಮಾಡುತ್ತದೆ**.

# ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ನ್ಯೂನತೆಗಳಿಗೆ ಕಾರಣವಾಗುತ್ತಿರುವ ಮಿಥ್ಯಗಳು

- ಭಾಷಾ ಬೆಳವಣಿಗೆಗೆ ಕನಿಷ್ಟ ಮಟ್ಟದ 'ಇನ್ಪುಟ್' ಸಾಕು
  - ಭಾಷೆಯಲ್ಲಿ 'ಮುಳುಗುವಿಕೆ'ಯ ಅಗತ್ಯತೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿರುವುದರಿಂದ ವಿದ್ಯಾರ್ಥಿಗೆ ಒದಗಿಸುತ್ತಿರುವ ಭಾಷಾ 'ಇನ್ಪುಟ್'ನ ಕೊರತೆ
  - ಅನೇಕ ಸಂದರ್ಭಗಳಲ್ಲಿ ಗ್ರಂಥಾಲಯಗಳು ಅಸ್ತಿತ್ವದಲ್ಲಿರುವುದಿಲ್ಲ ಅಥವಾ ನಿಷ್ಕ್ರಿಯವಾಗಿರುತ್ತವೆ.
  - ಪಠ್ಯಪುಸ್ತಕಗಳು ಹಾಗು ಶಿಕ್ಷಕರ ಮಾತುಗಳನ್ನು ಹೊರತುಪಡಿಸಿ ಮಕ್ಕಳಿಗೆ ಬೇರಾವ ಸಂಪನ್ಮೂಲಗಳು/ಭಾಷಾ ಸಾಮಗ್ರಿಗಳು ಲಭ್ಯವಿಲ್ಲದಿರಿವುದು.
  - ಆಲಿಸುವಿಕೆ ಮತ್ತು ಓದುವಿಕೆಗೆ ಸಾಕಷ್ಟು ಅವಕಾಶಗಳು ಅಗತ್ಯ. ಇದರ ಕೊರತೆ ಕಲಿಕಾ ವಾತಾವರಣವನ್ನು ನಿಸ್ಸಾರಗೊಳಿಸುತ್ತದೆ; ಕಲಿಕೆಯನ್ನು ಬೆಂಬಲಿಸುವುದಿಲ್ಲ
- ಭಾಷಾ ಕಲಿಕೆಗೆ ಭಾಷಾ ಶಿಕ್ಷಕರು ಮಾತ್ರ ಸಂಪನ್ಮೂಲ ವ್ಯಕ್ತಿ
  - ಸಾಮಾನ್ಯವಾಗಿ ತರಗತಿಯಲ್ಲಿ ಮಕ್ಕಳಿಗೆ ಮಾತನಾಡುವ, ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶಗಳು ಕಡಿಮೆ ಇರುತ್ತವೆ; ಶಿಕ್ಷಕರ ಮಾತು ಹೆಚ್ಚಾಗಿರುತ್ತದೆ.
  - ಮಕ್ಕಳಿಗೆ ಮಾತನಾಡಲು, ವ್ಯಕ್ತಪಡಿಸಲು ಮತ್ತು ಚರ್ಚಿಸಲು ಹೆಚ್ಚಿನ ಸಮಯವನ್ನು ನೀಡುವುದು ಬಹಳ ಮುಖ್ಯ
  - ಸಹಪಾಠಿಗಳೊಂದಿಗೆ ಸಂವಹನ, ಗುಂಪು ಕಾರ್ಯಗಳು ಭಾಷೆ ಕಲಿಕೆಯನ್ನು ಬೆಂಬಲಿಸುತ್ತವೆ
- ಭಾಷಾ ಕಲಿಕೆಗೆ ಪುನರಾವರ್ತಿತ ಕಾರ್ಯಗಳು ಅಗತ್ಯ
  - ಅಭ್ಯಾಸದಿಂದಲೇ ಕಲಿಕೆಯಾಗುವುದು ಎಂಬ ನಂಬಿಕೆಯ ಆದಾರದ ಮೇಲೆ ಪುಸ್ತಕದಲ್ಲಿ ನಕಲಿ ಮಾಡಬೇಕಾಗಿರುವ ಬಹಳಷ್ಟು ಗೃಹಕಾರ್ಯಗಳನ್ನು ನೀಡುವುದು
  - ಮಕ್ಕಳಿಗೆ ಅರ್ಥಪೂರ್ಣವಾಗಿಲ್ಲದಿರುವ ಕಾರ್ಯಗಳು ಕಲಿಕೆಯಲ್ಲಿ ಅವರ ತೊಡಗುವಿಕೆ ಹಾಗು ಆಸಕ್ತಿಯನ್ನು ಕಡಿಮೆ ಮಾಡುತ್ತದೆ

# ಭಾಷೆ ಕಲಿಕೆಯ ಎರಡು ಮುಖ್ಯ ತತ್ವಗಳು

- **ಕಲಿಯುವ ಭಾಷೆಯಲ್ಲಿ ಮುಳುಗುವಿಕೆ**: ಅರ್ಥವಾಗುವಂತಹ ಮತ್ತು ಸನ್ನಿವೇಷಕ್ಕೆ ಅನುಗುಣವಾಗಿರುವಂತಹ ಮಾಹಿತಿಯನ್ನು ಕಲಿಯುವ ಭಾಷೆಯಲ್ಲಿ ಒದಗಿಸುವುದು. ಉದಾ: ಒಂದು ಮಗುವನ್ನು ಆರೈಕೆ ಮಾಡುವವರು ಮಗುವಿಗೆ ಅರ್ಥವಾಗುವ ರೀತಿಯಲ್ಲಿ ಅದರೊಂದಿಗೆ ಬಹಳಷ್ಟು ಮಾತನಾಡುತ್ತಾರೆ (ಪೋಷಕರ ಭಾಷೆ)
- **ಭಾವಾತ್ಮಕ ತಡೆ ಕಡಿಮೆ ಇರಬೇಕು**. ಕಲಿಕಾ ಸನ್ನಿವೇಷವು ಮಗುವಿಗೆ ಬೆಂಬಲಿಸುವಂತಿರಬೇಕು; ಭಯ ಅಥವಾ ಆತಂಕವಿಲ್ಲದೇ ಆತ್ಮವಿಶ್ವಾಸ ಮತ್ತು ಕಲಿಯಬೇಕೆಂಬ ಬಯಕೆಯನ್ನು ವೃದ್ಧಿಸುವಂತಿರಬೇಕು